# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 174
2) ಸದಸ್ಯರ ಹೆಸರು : ಶ್ರೀ ಬಿ.ಎಂ. ಫಾರೂಖ್(ವಿಧಾನಸಭೆಯಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 05-07-2023
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನ ಮತ್ಸ್ಯೋದ್ಯಮಕ್ಕೆ ಅನುಕೂಲವಾಗಲು, ಮೀನುಗಾರರ ಸಮುದಾಯಕ್ಕೆ ಕುಳಾಯಿಯಲ್ಲಿ ಮೀನುಗಾರಿಕೆ ಜೆಟ್ಟೆ ಮಂಜೂರಾಗಿ ವರ್ಷಗಳೇ ಕಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, 196 ಕೋಟಿ ರೂ.ಗಳ ಸಾಗರಮಾಲಾ ಸ್ಕೀಮ್ ನ ಈ ಯೋಜನೆ ಶಿಲಾನ್ಯಾಸದ ಬಳಿಕ ಸ್ಥಗಿತಗೊಂಡಿರುವುದೇಕೆ; (ಸಂಪೂರ್ಣ ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆ ಕುಳಾಯಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಿಸುವ ಕಾಮಗಾರಿಯನ್ನು ಕೇಂದ್ರ, ರಾಜ್ಯ ಮತ್ತು ನವ ಮಂಗಳೂರು ಬಂದರು ಮಂಡಳಿ (ಎನ್.ಎಮ್.ಪಿ.ಟಿ.) ಮಂಗಳೂರು ರವರ ಸಹಭಾಗಿತ್ವದಲ್ಲಿ ರೂ.196.51 ಕೋಟಿಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ ಹಾಗೂ ಈ ಕಾಮಗಾರಿ ಸಂಬಂಧ ಮೊದಲನೆ ಕಂತಿನ ಹಣವನ್ನು ಎನ್.ಎಮ್.ಪಿ.ಟಿ., ಮಂಗಳೂರುರವರಿಗೆ ಮಾರ್ಚ್ 2019 ರಲ್ಲಿ ಬಿಡುಗಡೆಗೊಳಿಸಲಾಗಿದೆ.<br><br>ಮೊದಲನೆಯ ಟೆಂಡರ್ ಪ್ರಕ್ರಿಯೆಯನ್ನು ಮಾರ್ಚ್ 2019 ರಲ್ಲಿ ಅಂತಿಮಗೊಳಿಸಲಾಗಿದೆ. ಏಪ್ರಿಲ್ 2019 ರಲ್ಲಿ ಈ ಮೊದಲನೆ ಟೆಂಡರ್ ಪ್ರಕ್ರಿಯೆಯಲ್ಲಿ ಯಶಸ್ವಿಯಾಗದ 02 ಬಿಡ್ ದಾರರು ಟೆಂಡರ್ ಪ್ರಕ್ರಿಯೆಯನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿದ್ದರು. ಈ ದಾವೆಗಳು ದಿನಾಂಕ 06-09-2019 ರಂದು ಇತ್ಯರ್ಥವಾದ ಮೇಲೆ ಎರಡನೇ ಟೆಂಡರ್‌ನ್ನು ಫೆಬ್ರುವರಿ 2020 ರಲ್ಲಿ ಆಹ್ವಾನಿಸಲಾಗಿದೆ. ಈ ಎರಡನೇ ಟೆಂಡರ್‌ನ್ನು ಸೆಪ್ಟೆಂಬರ್ 2020 ರಲ್ಲಿ ಅಂತಿಮಗೊಳಿಸಲಾಗಿದೆ. ಈ ಟೆಂಡರ್‌ನಲ್ಲಿ ಎಲ್.1 ಬಿಡ್‌ದಾರರು ನಮೂದಿಸಿದ್ದ ಮೊತ್ತ ಕಾಮಗಾರಿಗೆ ನಿಗದಿಯಾಗಿರುವ ಮೊತ್ತಕ್ಕಿಂತ ಶೇ.54.62ರಷ್ಟು ಹೆಚ್ಚಾಗಿರುತ್ತದೆ.<br><br>ಆದುದರಿಂದ, ಟೆಂಡರ್ ಮೊತ್ತ ಹೆಚ್ಚಾಗಿರುವ ಬಗ್ಗೆ ಎನ್.ಎಮ್.ಪಿ.ಟಿ. ಸಭೆಯಲ್ಲಿ ಚರ್ಚಿಸಿ ಪರಿಷ್ಕೃತ ಅಂದಾಜು ಪಟ್ಟಿಯ ಬಗ್ಗೆ ಸಲಹೆ ಮತ್ತು ಅಭಿಪ್ರಾಯ ವನ್ನು ನುರಿತ ಪರಿಣಿತ ಸಂಸ್ಥೆಗಳಲ್ಲಿ ಪಡೆಯಲಾಗಿದೆ.<br><br>ಮಾರ್ಚ್ 2022ರಲ್ಲಿ ಕಡಿಮೆ ದರ ನಮೂದಿಸಿದ್ದ ಎಲ್.1 ಬಿಡ್‌ದಾರರಿಗೆ ಕಾಮಗಾರಿ ಕಾರ್ಯಾದೇಶ ನೀಡಲಾಗಿದ್ದು ಕಾಮಗಾರಿ ಪ್ರಾರಂಭಿಸಲು ಅನುಮತಿ ನೀಡಲಾಗಿದೆ.<br><br>ಏಪ್ರಿಲ್ 2022ರಲ್ಲಿ ಸದರಿ ಎರಡನೇ ಟೆಂಡರ್ ಪ್ರಕ್ರಿಯೆ ಕುರಿತು ಹೈಕೋರ್ಟ್ ನಲ್ಲಿ ತಡೆಯಾಜ್ಞೆ ನೀಡಲಾಗಿ ಈ ತಡೆಯಾಜ್ಞೆ ಆದೇಶವನ್ನು ಜುಲೈ 2022ರಲ್ಲಿ ತೆರವುಗೊಳಿಸಲಾಗಿದೆ. |

| | | |
|---|---|---|
| | | ಆನಂತರ ಕಾಮಗಾರಿ ಬಗ್ಗೆ ಹಲವಾರು ಸಮಸ್ಯೆಗಳಿರುವುದಾಗಿ ತಿಳಿಸಿ ಸ್ಥಳೀಯ ಗ್ರಾಮಸ್ಥರು ಕಾಮಗಾರಿ ಪ್ರಾರಂಭಿಸಲು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. ಈ ಸಮಸ್ಯೆಗಳ ಬಗ್ಗೆ ಅಧ್ಯಯನಗಳನ್ನು ನಡೆಸಲಾಗಿದೆ. ತದನಂತರ ಮಾರ್ಚ್ 2023ರಲ್ಲಿ ಸ್ಥಳೀಯರೊಂದಿಗೆ ಜನಪ್ರತಿನಿಧಿಗಳು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಸಭೆಗಳನ್ನು ನಡೆಸಿ ಕಾಮಗಾರಿ ಪ್ರಾರಂಭಕ್ಕೆ ಅನುವು ಮಾಡಿಕೊಟ್ಟಿರುತ್ತಾರೆ. ಪ್ರಸ್ತುತ ಕಾಮಗಾರಿ ಪ್ರಾರಂಭವಾಗಿ ಪ್ರಗತಿಯಲ್ಲಿರುತ್ತದೆ. |
| ಇ) | ಕೇಂದ್ರದ ಅಂದಿನ ಮಂತ್ರಿಗಳಿಂದ ಶಿಲಾನ್ಯಾಸ ನಡೆದರೂ ಅವರಿಂದ ಚಾಲನೆಗೊಂಡ ಯೋಜನೆ ಯಾವಾಗ ಕಾರ್ಯಗತಗೊಳ್ಳುವುದು; | ಯೋಜನೆಯ ಅಂದಾಜು ಪೂರ್ಣಗೊಳ್ಳುವ ದಿನಾಂಕವನ್ನು ಆಗಸ್ಟ್ 2025ಕ್ಕೆ ನಿಗದಿಪಡಿಸಲಾಗಿದೆ. |
| ಈ) | ಯೋಜನೆಗೆ ಮಂಜೂರಾಗಿದ್ದು, ಕೇಂದ್ರದಿಂದ ಅನುದಾನ ಬಿಡುಗಡೆಯಾಗಿದ್ದರೂ, ಯೋಜನೆ ನಿಲ್ಲಿಸಿ ಬೆಸ್ತ ಸಮುದಾಯಕ್ಕೆ ತೊಂದರೆ ನೀಡುತ್ತಿರುವುದರ ಉದ್ದೇಶವಾದರೂ ಏನು; | ಬೆಸ್ತ ಸಮುದಾಯಕ್ಕೆ ತೊಂದರೆ ನೀಡುವ ಯಾವುದೇ ಉದ್ದೇಶದಿಂದ ಯೋಜನೆಯನ್ನು ನಿಲ್ಲಿಸಿರುವುದಿಲ್ಲ. ಹಾಗೂ ಪ್ರಶ್ನೆ ಸಂ. (ಆ)ಗೆ ನೀಡಿರುವ ಉತ್ತರದಲ್ಲಿ ವಿವರಿಸಿರುವ ಕಾರಣಗಳಿಂದ ಯೋಜನೆ ವಿಳಂಬವಾಗಿದೆ. ಹಾಗೂ ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದೆ. |
| ಉ) | ಚಾಲ್ತಿಯಲ್ಲಿರುವ ಬಂದರು, ಜೆಟ್ಟಿಗಳ ಒತ್ತಡ ತಪ್ಪಿಸಿ, ಹೆಚ್ಚಿಸಿ ಮತ್ಸ್ಯೋದ್ಯಮದಿಂದ ಆರ್ಥಿಕ ಚಟುವಟಿಕೆ ಹೆಚ್ಚಾಗಿ ಜನಜೀವನ ಮಟ್ಟ ಸುಧಾರಣೆಯಾಗಲು ಸರ್ಕಾರ ಪ್ರಯತ್ನಿಸುವುದೇ? (ಕ್ರಿಯಾ ಯೋಜನೆಗಳ ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ರಾಜ್ಯದಲ್ಲಿ ಬಂದರು, ಜೆಟ್ಟಿಗಳ ಒತ್ತಡ ತಪ್ಪಿಸಿ, ಹೆಚ್ಚಿನ ಮತ್ಸ್ಯೋದ್ಯಮದಿಂದ ಆರ್ಥಿಕ ಚಟುವಟಿಕೆ ಹೆಚ್ಚಾಗಿ ಜನಜೀವನ ಮಟ್ಟ ಸುಧಾರಣೆಯಾಗಲು ಸರ್ಕಾರ ಪ್ರಯತ್ನಿಸುತ್ತಿದೆ. ಕ್ರಿಯಾ ಯೋಜನೆ ವಿವರ ಈ ಕೆಳಗಿನಂತಿದೆ.<br>1)ಉತ್ತರ ಕನ್ನಡ ಜಿಲ್ಲೆ, ಭಟ್ಕಳ ತಾಲ್ಲೂಕಿನ ಅಳ್ವೇಕೋಡಿ ತೆಂಗಿನಗುಂಡಿಯಲ್ಲಿ ರೂ.86.08 ಕೋಟಿ ವೆಚ್ಚದಲ್ಲಿ ಅಲೆ ತಡೆಗೋಡೆಯ ನಿರ್ಮಾಣ ಇತ್ತೀಚೆಗೆ ಪೂರ್ಣಗೊಂಡಿದೆ.<br>2)ಉಡುಪಿ ಜಿಲ್ಲೆ, ಕಾಪು ತಾಲ್ಲೂಕು ಹೆಜಮಾಡಿ ಕೋಡಿಯಲ್ಲಿ ರೂ. 188.73 ಕೋಟಿ ವೆಚ್ಚದಲ್ಲಿ ನೂತನ ಮೀನುಗಾರಿಕೆ ಬಂದರು ನಿರ್ಮಾಣದ ಕಾಮಗಾರಿ ಪ್ರಗತಿಯಲ್ಲಿದೆ |

ಸಂಖ್ಯೆ: ಪಸಂಮೀ ಇ-89 ಮೀಇಯೋ 2023

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು